O.S. ನಂಬರಃ 47/2017
ಡಿ. ಡಬ್ಲ್ಯೂಃ 1

ದಿಃ 02-04-2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟಿ ಸವಾಲುಃ ವಾದಿಯರ ಪರ ವಕೀಲರಾದ ಶ್ರೀ ಎಂ.ಪಿ.ಬಿ ಇವರಿಂದಃ

ಸಾಮಾನ್ಯವಾಗಿ ನೀವು ಎಷ್ಟನೇ ವರ್ಷದಿಂದ ಕೋರ್ಟ್ ಕಚೇರಿಯ ವ್ಯವಹಾರದ ಅನುಭವಿರುತ್ತದೆ ಎಂದರೆ ಸಾಕ್ಷಿಯು 8-10 ವರ್ಷಗಳಿಂದ ಬಂದು ಹೋಗುತ್ತಿದ್ದೇನೆ ಎಂದು ನುಡಿಯುತ್ತಾರೆ. ನಿಮ್ಮ ವಿರುದ್ಧ ಎಷ್ಟು ಕ್ರಿಮಿನಲ್ ಪ್ರಕರಣ ಇದ್ದವು ಎಂದರೆ ಸಾಕ್ಷಿಯು ಇದೇ ಜಮೀನಿಗೆ ಸಂಬಂಧಪಟ್ಟು ಒಂದು ಪ್ರಕರಣ ಇತ್ತು ಎಂದು ನುಡಿಯುತ್ತಾರೆ. ನಿಮಗೆ ಶಿಕ್ಷೆ ಆಗಿತ್ತಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ.

2. ನಿಮಗೆ ವಾದಿಯರು ಎಷ್ಟು ವರ್ಷಗಳಿಂದ ಪರಿಚಯಸ್ಥರು ಎಂದರೆ ಸಾಕ್ಷಿಯು 7-8 ವರ್ಷಗಳಿಂದ ಪರಿಚಯ ಎಂದು ನುಡಿಯುತ್ತಾರೆ. ಅವರ ತಂದೆಯ ಪರಿಚಯ ಎಷ್ಟು ವರ್ಷಗಳಿಂದ ಇರುತ್ತದೆ ಎಂದರೆ ಸಾಕ್ಷಿಯು ಅವರ ಪರಿಚಯವಿರುವುದಿಲ್ಲ ಎಂದು ನುಡಿಯುತ್ತಾರೆ. ವಾದಿಯರು ನಿಮಗೆ ಯಾವ ರೀತಿಯಾಗಿ ಪರಿಚಯವಾಗಿರುತ್ತಾರೆ ಎಂದರೆ ಸಾಕ್ಷಿಯು ಈ ಪ್ರಕರಣದ ದಾವಾ ಆಸ್ತಿಗೆ ಸಂಬಂಧಪಟ್ಟು ನೀವೇ ಸದರಿ ಜಮೀನನ್ನು ತೆಗೆದುಕೊಳ್ಳಿ ಎಂದು ಹೇಳಿದ್ದರಿಂದ ಪರಿಚಯವಾಗಿರುತ್ತಾರೆ ಎಂದು ನುಡಿಯುತ್ತಾರೆ. ನಿಮ್ಮ ಹೆಸರಿಗೆ

ಜಮೀನನ್ನು ತೆಗೆದುಕೊಳ್ಳಲು ಏನಾದರೂ ತೊಂದರೆ ಇತ್ತಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ವಾದಿಯರು ಸಹೋದರಿಯರು ಎಂದು ನಿಮಗೆ ಯಾವಾಗ ಗೊತ್ತಾಗಿರುತ್ತದೆ ಎಂದರೆ ಸಾಕ್ಷಿಯು ಅವರು ಬಂದು ಹೇಳಿದಾಗ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ಅವರು ಜಮೀನನ್ನುಕೊಡುತ್ತೇನೆ ಎಂದು ರೆಕಾರ್ಡ ಉತಾರಗಳನ್ನು ಏನಾದರೂ ತಂದಿದ್ದರಾ ಎಂರದೆ ಸಾಕ್ಷಿಯು ಉತಾರಗಳು ಅವರ ತಾಯಿ ಮತ್ತು ಚಿಕ್ಕಮ್ಮನ ಹೆಸರಿನಲ್ಲಿ ಇದ್ದವು ಎಂದು ನುಡಿಯುತ್ತಾರೆ. ನೀವು ದಾವಾ ಆಸ್ತಿಯ ಉತಾರಗಳನ್ನು ನೋಡಿದ್ದೀರಾ ಎಂದರೆ ಹೌದು ಎಂದು ನುಡಿಯುತ್ತಾರೆ. ಅವರು ಯಾವ ಯಾವ ಜಮೀನುಗಳ ರೆಕಾರ್ಡ ಉತಾರಗಳನ್ನು ತಂದಿದ್ದರು ಎಂದರೆ ಸಾಕ್ಷಿಯು ಬಹಳಷ್ಟು ಜಮೀನುಗಳ ದಾಖಲಾತಿಗಳನ್ನು ತಂದಿದ್ದರು ಎಂದು ನುಡಿಯುತ್ತಾರೆ. ನಿಮ್ಮ ಎಷ್ಟನೇ ವಯಸ್ಸಿನಿಂದ ರೆಕಾರ್ಡ ಉತಾರಗಳನ್ನು ನೋಡುವ ಅನುಭವವಿರುತ್ತದೆ ಎಂದರೆ ಸಾಕ್ಷಿಯು ನಾನು ವಯಸ್ಸಿಗೆ ಬಂದಾಗಿನಿಂದ ಇರುತ್ತದೆ ಎಂದು ನುಡಿಯುತ್ತಾರೆ. ವಾದಿಯರಿಗೆ ರೆಕಾರ್ಡ ಉತಾರಗಳನ್ನು ಓದಲು ಬರುತ್ತಾ ಎಂದರೆ ಸಾಕ್ಷಿಯು 3ನೇ ವಾದಿಗೆ ಬರುತ್ತದೆ ಎಂದು ನುಡಿಯುತ್ತಾರೆ. ನೀವು ನಿಮ್ಮ ಊರಿನಲ್ಲಿ ಬೇರೇ ಜನರಿಗೆ ಸಹಾಯ ಮಾಡುವಂತಹ ವ್ಯಕ್ತಿ ಎಂದರೆ ಸರಿಯಲ್ಲ. ವಾದಿಯರು ತಂದು ಕೊಟ್ಟ ರೆಕಾರ್ಡ ಉತಾರಗಳಲ್ಲಿ ವಾದಿಯರ ಹೆಸರು ಏನಾದರೂಾ ಇತ್ತಾ ಎಂದರೆ ಸಾಕ್ಷಿಯು ಇತ್ತು ಎಂದು ನುಡಿಯುತ್ತಾರೆ. ರೆಕಾರ್ಡ ಉತಾರಗಳನ್ನು ತಂದು ಕೊಟ್ಟ ಸಮಯದಲ್ಲಿ ಅವರು ಸ್ವಂತವಾಗಿ ಕ್ರಯಪತ್ರ ಮಾಡಿಕೊಡಲು ಅಧಿಕಾರ ಇತ್ತಾ ಎಂದರೆ ಸಾಕ್ಷಿಯು ತಕರಾರಿ ಜಮೀನು ಆಗಿದ್ದರಿಂದ ಇರಲಿಲ್ಲ ಎಂದು ನುಡಿಯುತ್ತಾರೆ. ಅವರು ಜಮೀನನ್ನು ಮಾರಾಟ ಮಾಡಿಕೊಡುತ್ತೇನೆ ಎಂದು

ಹೇಳಿದ್ದಾಗ, ನೀವು ಕ್ರಯಪತ್ರ ಮಾಡಿಕೊಡುವ ಸಮಯದಲ್ಲಿ ಹೋಗಿದ್ದೀರಾ ಎಂದರೆ ಸಾಕ್ಷಿಯು ಅವರ ಜೊತೆಗೆ ಹೋಗಿದ್ದೆ ಎಂದು ನುಡಿಯುತ್ತಾರೆ. ಅವರ ಜೊತೆಗೆ ಎಲ್ಲೆಲ್ಲಿ ಹೋಗಿರುತ್ತೀರಿ ಎಂದರೆ ಸಾಕ್ಷಿಯು ವಕೀಲರ ಮನೆಗೆ ಹೋಗಿರುತ್ತೇವೆ ಎಂದು ನುಡಿಯುತ್ತಾರೆ. ಮತ್ತೆ ಎಲ್ಲೂ ಹೋಗಿರುವುದಿಲ್ಲ. ನೀವು ವಕೀಲರಾದ ಎಸ್ ಹೆಚಿ ನಾಯಕ ಇವರ ಮನೆಗೆ ಹೋದಾಗ ವಾದಿಯರು ಜಮೀನಿನ ಮಾಹಿತಿಯನ್ನು ಕೊಟ್ಟಿದ್ದರಾ ಎಂದರೆ ಹೌದು ಎಂದು ನುಡಿಯುತ್ತಾರೆ. ನಿಮ್ಮ ಅನುಭವದ ಪ್ರಕಾರ ಮೋಕ್ತಿಯಾರನಾಮೆ ಪತ್ರವನ್ನು ಬಾಂಡ್ ಪೇಪರಲ್ಲಿ ಮಾಡುತ್ತಾರಾ ಅಥವಾ ಸಾದಾ ಪೇಪರಲ್ಲಿ ಮಾಡುತ್ತಾರಾ ಎಂದರೆ ಸಾಕ್ಷಿಯು ಎಸ್ ಹೆಚ್ ನಾಯಕ ಇವರು ಬಾಂಡ್ ಪೇಪರಲ್ಲಿ ಮಾಡಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಎಸ್ ಹೆಚ್ ನಾಯಕ ಇವರು ಬಾಂಡ್ ಪೇಪರಲ್ಲಿ ಕೈಯಿಂದ ಬರೆದಿರುತ್ತಾರಾ ಅಥವಾ ಟೈಪ್ ಮಾಡಿರುತ್ತಾರಾ ಎಂದರೆ ಟೈಪ್ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ವಕೀಲರಾದ ಎಸ್ ಹೆಚ್ ನಾಯಕ ಇವರ ಮನೆಯಲ್ಲಿ ಬಾಂಡಿ ಪೇಪರ್ ಇರುತ್ತಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಸ್ವತಃ 3ನೇ ವಾದಿ ತೆಗೆದುಕೊಂಡು ಬಂದಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಬಾಂಡ್ ಪೇಪರನ್ನು ತಯಾರಿಸಿದ ನಂತರ ಯಾರ ಕೈಯಲ್ಲಿ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು 3ನೇ ವಾದಿಯ ಕೈಯಲ್ಲಿ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. 3ನೇ ವಾದಿಗೆ ಕೊಟ್ಟ ಸದರಿ ಬಾಂಡ್ ಪೇಪರನ್ನು ಎಲ್ಲಿಗೆ ತೆಗೆದುಕೊಂಡು ಹೋಗಿರುತ್ತಾರೆ ಎಂದರೆ ಸಾಕ್ಷಿಯು ಅವರ ಮನೆಗೆ ತೆಗೆದುಕೊಂಡು ಹೋಗಿರುತ್ತಾರೆ ಎಂದು ನುಡಿಯುತ್ತಾರೆ. 3ನೇ ವಾದಿಯು ನಿಮಗೆ ಯಾವಾಗ ಬಾಂಡ್ ಪೇಪರನ್ನು ಕೊಟ್ಟಿರುತ್ತಾರೆ

ಎಂದರೆ ಸಾಕ್ಷಿಯು ದಿಃ16-01-2015 ಮತ್ತು 2016 ರಂದು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಬಾಂಡ್ ಪೇಪರನ್ನು ಪಡೆದುಕೊಂಡ ನಂತರ ವಾದಿಯರನ್ನು ಭೇಟಿಯಾಗಿರುತ್ತೀರಾ ಎಂದರೆ ಹೌದು ಎಂದು ನುಡಿಯುತ್ತಾರೆ. ವಾದಿಯರನ್ನು ಕೊನೆಯದಾಗಿ ಯಾವಾಗ ಭೇಟಿಯಾಗಿರುತ್ತೀರಿ ಎಂದರೆ ಸಾಕ್ಷಿಯು ಬಹಳಷ್ಟು ಸಹ ಭೇಟಿಯಾಗಿದ್ದು, ನ್ಯಾಯಾಲಯಕ್ಕೂ ಸಹ ಬಂದಾಗಲೂ ಭೇಟಿಯಾಗಿರುತ್ತೇನೆ ಎಂದು ನುಡಿಯುತ್ತಾರೆ. ಎಸ್ ಹೆಚ್ ನಾಯಕ ಇವರು ಮನೆಯಲ್ಲಿ ಸಹಿಯಾದ ನಂತರ ಮತ್ತೆ ಯಾವಾಗಲಾದರೂ ವಾದಿಯರ ಸಹಿಯನ್ನು ನೀವು ಪಡೆದುಕೊಂಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನೋಟರಿ ಮಾಡಿಸಲು ವಾದಿಯರಿಗೆ ಹಣ ಇತ್ತಾ ಎಂದರೆ ಸಾಕ್ಷಿಯು ಅವರೇ ಖರ್ಚನ್ನು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಎಷ್ಟು ಹಣ ಕೊಟ್ಟಿರುತ್ತಾರೆ ಎಂದು ಪಾವತಿಯನ್ನೇನಾದರೂ ಕೊಟ್ಟಿರುತ್ತಾರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಎಸ್ ಹೆಚ್ ನಾಯಕ ಇವರ ಮನೆಯಿಂದ ನಾನು ನನ್ನ ಮನೆಗೆ ಹೋಗಿದ್ದು, ವಾದಿಯರು ಅವರ ಮನಗೆ ಹೋಗಿರುತ್ತಾರೆ. ವಾದಿಯರ ಕಡೆಯಿಂದ ಮೊಕ್ತಿಯಾರನಾಮೆಯನ್ನು ಬರೆದುಕೊಡುವಂತಹ ಸ್ಥಿತಿ ಏನು ಬಂದಿತ್ತು ಎಂದರೆ ಸಾಕ್ಷಿಯು ವಾದಿಯರು ಕೊಡುತ್ತೇನೆ ಎಂದು ಹೇಳಿದ್ದರಿಂದ ನಾನು ತೆಗೆದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ನೀವೇನಾದರೂ ಮೊಕ್ತಿಯಾರನಾಮೆಯನ್ನು ಎಸ್ ಹೆಚ್ ನಾಯಕ ಇವರ ಕಡೆಯಿಂದ ತೆಗೆದುಕೊಂಡ ನಂತರ ಉಪಯೋಗ ಮಾಡಿಕೊಂಡಿರುತ್ತೀರಾ ಎಂದರೆ ಹೌದು ಎಂದು ನುಡಿಯುತ್ತಾರೆ. ವಾದಿಯರಿಗೆ ನೀವು ಮೊಕ್ತಿಯಾರನಾಮೆ ಪತ್ರವನ್ನು ಇಂತಹ ಕಾರಣಕ್ಕಾಗಿ ಉಪಯೋಗಿಸಿರುತ್ತೇನೆ ಎಂದು

ತಿಳಿಸಿರುತ್ತೀರಾ ಎಂದರೆ ಹೌದು ಎಂದು ನುಡಿಯುತ್ತಾರೆ. ಎಷ್ಟನೇ ತಾರೀಖಿನಂದು ತಿಳಿಸಿರುತ್ತೀರಿ ಎಂದರೆ ಸಾಕ್ಷಿಯು ದಿಃ07-08-2015 ರಲ್ಲಿ ತಿಸಿರುತ್ತೇನೆ ಎಂದು ನುಡಿಯುತ್ತಾರೆ. ಲೇಖಿ ಮುಖಾಂತರ ತಿಳಿಸಿರುತ್ತೀರಾ ಅಥವಾ ತೋಂಡಿ ಮುಖಾಂತರ ತಿಳಿಸಿರುತ್ತೀರಾ ಎಂದರೆ ಸಾಕ್ಷಿಯ ತೋಂಡಿ ಮುಖಾಂತರ ತಿಳಿಸಿರುತ್ತೇನೆ ಎಂದು ನುಡಿಯುತ್ತಾರೆ. ಯಾವಾ ಉದ್ದೇಶಕ್ಕಾಗಿ ಮೋಕ್ತಿಯಾರನಾಮೆ ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಜಮೀನನ್ನು ಮಾಡಿಕೊಡುತ್ತೇವೆ ತೆಗೆದುಕೊಳ್ಳಿ ಎಂದು ಹೇಳಿದ್ದರಿಂದ ತೆಗೆದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ.

3. ನೀವು ರೆಕಾರ್ಡ ಉತಾರಗಳನ್ನು ಅವರ ತಾಯಿ ಹಾಗೂ ಚಿಕ್ಕಮ್ಮನ ಹೆಸರಿನಲ್ಲಿ ಇರುವುದನ್ನು ನಿಮ್ಮ ಹೆಸರಿಗೆ ದಾಖಲಿಸಿಕೊಡುತ್ತೇನೆ ಎಂದು ಹೇಳಿಕೊಂಡು ವಾದಿಯರಿಂದ ಮೋಕ್ತಿಯಾರನಾಮೆ ಪತ್ರವನ್ನು ಬರೆಸಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ಪಹಣಿ ಪತ್ರಿಕೆಯಲ್ಲಿ ವಾದಿಯರ ಹೆಸರುಗಳನ್ನು ದಾಖಲಿಸಿಕೊಡುತ್ತೇನೆ ಎಂದು ಹೇಳಿ ಮೋಕ್ತಿಯಾರನಾಮೆ ಪತ್ರದಲ್ಲಿ ಅವರ ಸಹಿಗಳನ್ನು ಪಡೆದುಕೊಂಡಿರುತ್ತೀರಿ ಎಂದರೆ ಸರಿಯಲ್ಲ. ವಾದಿಯರು ಅನಕ್ಷರಸ್ಥರು ಹಾಗೂ ಅವರಿಗೆ ಓದಲು ಬರೆಯಲು ಬರುವುದಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. ದಾವೆಯನ್ನು ಸಲ್ಲಿಸುವವರೆಗ ನಿಮಗೆ ವಾದಿಯರ ಮೇಲೆ ನಂಬಿಕೆ ಇತ್ತಾ ಅಥವಾ ಇಲ್ಲವಾ ಎಂದರೆ ಇತ್ತು ಎಂದು ನುಡಿಯುತ್ತಾರೆ. ಅವರ ನಂಬಕೆಗಳನ್ನು ನೀವು ಸದರಿ ದಾವೆ ಆಗುವವರೆಗೆ ಗಳಿಸಿರುತ್ತೀರಾ ಅಥವಾ ಇಲ್ಲವಾ ಎಂದರೆ ಸಾಕ್ಷಿಯು ನಂಬಿಕೆ

ಇಟ್ಟುಕೊಂಡೇ ವ್ಯವಹಾರವನ್ನು ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಿಮ್ಮ ಹಾಗೂ ವಾದಿಯರ ನಡುವೆ ನಂಬಿಕೆ ಎಷ್ಟು ವರ್ಷಗಳವರೆಗ ಇತ್ತು ಎಂದರೆ ಸಾಕ್ಷಿಯು ಸದರಿ ದಾವೆ ಸಲ್ಲಿಸುವವರೆಗೂ ಇತ್ತು ಎಂದು ನುಡಿಯುತ್ತಾರೆ.

4. ನಿಮಗೆ ಎಷ್ಟು ಜನ ಗಂಡು ಹಾಗೂ ಹೆಣ್ಣು ಮಕ್ಕಳು ಎಂದರೆ ಸಾಕ್ಷಿಯು 5 ಜನ ಗಂಡು ಮಕ್ಕಳು ಹಾಗೂ 5 ಜನ ಹೆಣ್ಣುಮಕ್ಕಳು ಎಂದು ನುಡಿಯುತ್ತಾರೆ. ನ್ಯಾಯಾಲಯದಲ್ಲಿ ಎಷ್ಟು ಜನ ಮಕ್ಕಳು ಕೆಲಸ ಮಾಡುತ್ತಿದ್ದಾರೆ ಎಂದರೆ ಸಾಕ್ಷಿಯು ಇಬ್ಬರು ಮಾಡುತ್ತಾರೆ ಎಂದು ನುಡಿಯುತ್ತಾರೆ. ಸಾಕ್ಷಿಯು ಸ್ವತಃ ಒಬ್ಬರು ಭಟ್ಕಳದಲ್ಲಿ ಹಾಗೂ ಇನ್ನೊಬ್ಬರು ಅಂಕೋಲಾದಲ್ಲಿ ಮಾಡುತ್ತಾರೆ ಎಂದು ನುಡಿಯುತ್ತಾರೆ. ನಿಮ್ಮ ಮಗ ವೆಂಕಟೇಶ ಇವರು ಏನು ಕೆಲಸ ಮಾಡುತ್ತಾರೆ ಎಂದರೆ ಸಾಕ್ಷಿಯು ಮೀನುಗಾರಿಕೆ ಕೆಲಸ ಮಾಡುತ್ತಾರೆ ಎಂದು ನುಡಿಯುತ್ತಾರೆ. ನಿಮ್ಮ ಹಾಗೂ ನಿಮ್ಮ ಮಗನ ವ್ಯವಹಾರದ ಖಾತೆಗಳು ಒಂದೇ ಇರುತ್ತಾ ಅಥವಾ ಬೇರೆ ಬೇರೆ ಇರುತ್ತಾ ಎಂದರೆ ಸಾಕ್ಷಿಯು ಬೇರೆ ಬೇರೆ ಖಾತೆಗಳು ಇರುತ್ತವೆ ಎಂದು ನುಡಿಯುತ್ತಾರೆ. ದಾವಾ ಜಮೀನುಗಳಿಗೆ ಸಂಬಂಧಪಟ್ಟು 2ನೇ ಪ್ರತಿವಾದಿಗೆ ಎಷ್ಟು ಕ್ರಯಪತ್ರವನ್ನು ಮಾಡಿಕೊಟ್ಟಿರುತ್ತೀರಿ ಎಂದರೆ ಸಾಕ್ಷಿಯು 3 ಕ್ರಯಪತ್ರಗಳನ್ನು ಮಾಡಿಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಮೊದಲನೇ ಕ್ರಯಪತ್ರವನ್ನು ದಿಃ07-08-2015 ರಂದು ಮಾಡಿಕೊಟ್ಟಿರುತ್ತೇನೆ. ಎರಡನೇ ಕ್ರಯಪತ್ರವನ್ನು ಯಾವಾಗ ಮಾಡಿಕೊಟ್ಟಿರುತ್ತೀರಿ ಎಂದರೆ ಸಾಕ್ಷಿಯು ದಿಃ12-04-2016 ರಂದು ಮಾಡಿಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಇನ್ನೊಂದು ಕ್ರಯಪತ್ರವನ್ನು ದಿಃ07-

03-2017 ರಂದು ಮಾಡಿಕೊಟ್ಟಿರುತ್ತೇನೆ. ದಾವಾ ಜಮೀನಾದ ಸರ್ವೆ ನಂ.84/3ಅ ಮತ್ತು 87/1ಬ ನೆದ್ದಕ್ಕೆ ಸಂಬಂಧಪಟ್ಟು ಮಾಡಿಕೊಟ್ಟ ಕ್ರಯಪತ್ರದ ರಖಂ ನ್ನು ನಿಮ್ಮ ಖಾತೆಗೆ 2ನೇ ಪ್ರತಿವಾದಿಯು ಹಣವನ್ನು ಹಾಕಿದ್ದರ ಬಗ್ಗೆ ದಾಖಲಾತಿ ಇರುತ್ತಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಸದರಿ ಜಮೀನಿಗೆ ಸಂಬಂಧಪಟ್ಟು ವಾದಿಯರಿಗೆ ಕ್ರಯದ ರಖಂ ನ್ನು ಕೊಟ್ಟಿದ್ದರ ಬಗ್ಗೆ ಪಾವತಿ ಇರುತ್ತಾ ಎಂದರೆ ಸಾಕ್ಷಿಯು ದಿಃ16-01-2015 ರಂದು ಜಿ ಪಿ ಎ ಮಾಡಿಕೊಟ್ಟ ಸಂದರ್ಭದಲ್ಲಿ ಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ಸಾಕ್ಷಿಯು ಸ್ವತಃ ನಾನು ಕೊಟ್ಟಿರುವುದಿಲ್ಲ, 2ನೇ ಪ್ರತಿವಾದಿ ಕೊಟ್ಟಿರುತ್ತಾನೆ ಎಂದು ನುಡಿಯುತ್ತಾರೆ. ನೀವು ಮೋಕ್ತಿಯಾರನಾಮೆದಾರನಾಗಿ ವಾದಿಯರಿಗೆ ಹಣವನ್ನು ಕೊಟ್ಟಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಕ್ರಯಪತ್ರದಲ್ಲಿ ನೀವು ಇಂತಹ ದಿನಾಂಕದಂದು ವಾದಿಯರಿಗೆ ಹಣ ಸಂದಾಯ ಮಾಡಿರುತ್ತೇನೆ ಎಂದು ನಮೂದು ಇರುತ್ತಾ ಎಂದರೆ ಇರುತ್ತದೆ ಎಂದು ನುಡಿಯುತ್ತಾರೆ. ನೀವು 2ನೇ ಪ್ರತಿವಾದಿಗೆ ಕ್ರಯಪತ್ರ ಮಾಡಿಕೊಡುವ ಸಂದರ್ಭದಲ್ಲಿ ವಾದಿಯರು ಬಂದಿದ್ದರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಸ್ವತಃ ಅವರು ಬರುವುದಿಲ್ಲ ಎಂಬ ಕಾರಣದಿಂದ ಜಿಪಿಎ ಮಾಡಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಿಮ್ಮ ಪ್ರಕಾರ ಮೇಲೆ ಹೇಳಿದ ದಿನಾಂಕದಂದು ಮೂರು ಕ್ರಯುಪತ್ರಗಳು ಆಗುವ ದಿನದಂದು ವಾದಿಯರಿಗೆ ಹಣವನ್ನು ಕೊಟ್ಟಿರುವುದಿಲ್ಲ ಎಂದರೆ ಸರಿ. ನೀವೇನಾದರೂ ನಿಮ್ಮ ಖಾತೆಯಿಂದ ವಾದಿಯರಿಗೆ ಹಣವನ್ನು ಕೊಡಲು ವಿತ್ ಡ್ರಾ ಮಾಡಿಕೊಂಡಿರುತ್ತೀರಾ ಎಂದರೆ ಸಾಕ್ಷಿಯು ನನ್ನ ಖಾತೆಯಲ್ಲಿ ಹಣನೇ ಇರಲಿಲ್ಲ ಎಂದು ನುಡಿಯುತ್ತಾರೆ. ಮೂರು ಕ್ರಯಪತ್ರಗಳನ್ನು ಒಂದೇ ದಿನ ಮಾಡಿಕೊಡಲು ಏನಾದರೂ

ತೊಂದರೆ ಇತ್ತಾ ಎಂದರೆ ಹೌದು ಎಂದು ನುಡಿಯುತ್ತಾರೆ. ಏನು ತೊಂದರೆ ಇತ್ತು ಎಂದರೆ ಸಾಕ್ಷಿಯು ಒಂದು ಜಮೀನು ವಾರಸಾ ಆಗಿದ್ದು, ಉಳಿದ 2 ಜಮೀನುಗಳು ಸಾಮಾಯಿಕವಾಗಿದ್ದವು ಎಂದು ನುಡಿಯುತ್ತಾರೆ. ನಿಮ್ಮ ಮಗನಿಗೇ ಕ್ರಯಪತ್ರವನ್ನು ಕೊಡಲು ಯಾವ ಕಾರಣ ಇತ್ತು ಎಂದರೆ ಸಾಕ್ಷಿಯು ಜಿ ಪಿ ಎ ಯಲ್ಲಿ ನಿಮ್ಮ ಸಂಬಂಧಿಕರಿಗೇ ಕೊಡಬಹುದು ಎಂದು ನಮೂದು ಇತ್ತು ಎಂದು ನುಡಿಯುತ್ತಾರೆ.

5. ಕರಾರು ಪತ್ರಕ್ಕೆ ನೀವೇನಾದರೂ ಸಹಿ ಮಾಡಿರುತ್ತೀರಾ ಇಲ್ಲ ಎಂದು ನುಡಿಯುತ್ತಾರೆ. ಕರಾರು ಪತ್ರ ಯಾರ ತಾಬಾ ಇತ್ತು ಎಂದರೆ ಸಾಕ್ಷಿಯು 2ನೇ ಪ್ರತಿವಾದಿಯ ತಾಬಾ ಇತ್ತು ಎಂದು ನುಡಿಯುತ್ತಾರೆ. ದಿಃ16-01-2015 ರಂದು ರೂ.4,91,000/- ಹಣವನ್ನು ನಿಮ್ಮ ಮಗನ ಖಾತೆಯಿಂದ ವಿತ್ ಡ್ರಾ ಮಾಡಿದ್ದರ ಬಗ್ಗೆ ದಾಖಲಾತಿ ಇದೆಯಾ ಎಂದರೆ ಸಾಕ್ಷಿಯು ದಾಖಲಾತಿ ಇರುವುದಿಲ್ಲ, ಹಣ ಮನೆಯಲ್ಲಿ ಇತ್ತು ನಗದು ಮುಖಾಂತರ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ವಾದಿಯರಿಗೆ ಹಣ ಕೊಟ್ಟ ದಿನದಂದು ಅವರು ಸ್ವತಃ ಬಂದು ಕ್ರಯಪತ್ರ ಮಾಡಿಕೊಡಲು ಏನಾದರೂ ತೊಂದರೆ ಇತ್ತಾ ಎಂದರೆ ಸಾಕ್ಷಿಯು ವಾದಿಯರು ನಾವು ಬರುವುದಿಲ್ಲ ನೀವೇ ಮಾಡಿಕೊಳ್ಳಿ ಎಂದು ಹೇಳಿದ್ದರು ಎಂದು ನುಡಿಯುತ್ತಾರೆ. ಒಟ್ಟು ಎಷ್ಟು ಮೋಕ್ತಿಯಾರನಾಮೆ ಪತ್ರಗಳನ್ನು ಮಾಡಿಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು 2 ಎಂದು ನುಡಿಯುತ್ತಾರೆ. ಬೇರೆ ಬೇರೆ ದಿನದಂದು ಮಾಡಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ವಾದಿಯರ ಅನಕ್ಷರತೆ ದುರ್ಲಾಭ ಪಡೆದುಕೊಂಡು ನೀವು ಹಾಗೂ ನಿಮ್ಮ ಮಗ ಜಮೀನನ್ನು

ಕಬಳಿಸುವ ಉದ್ದೇಶದಿಂದ ಅವರಿಂದ ಮೋಸದಿಂದ ಸಹಿಯನ್ನು ಪಡೆದುಕೊಂಡಿರುತ್ತೀರಿ ಎಂದರೆ ಸರಿಯಲ್ಲ. ಅದೇ ರೀತಿ ದಿಃ07-08-2015 ರಂದು ನಿಮ್ಮ ಕುಟುಂಬದಲ್ಲಿ ಜಮೀನು ಇರಲಿ ಎಂಬ ಉದ್ದೇಶದಿಂದ ನಿಮ್ಮ ಮಗನಿಗೆ ಕ್ರಯಪತ್ರವನ್ನು ಮಾಡಿಕೊಟ್ಟಿರುತ್ತೀರಿ ಎಂದರೆ ಸರಿ.

6. ಮೃತ ತುಕಾರಾಂ ಹನುಮಾ ಗೌಡ ಇವರು ಏನಾದರೂ ನಿಮಗೆ ಜಿ ಪಿ ಎ ಕೊಟ್ಟಿರುತ್ತಾರಾ ಎಂದರೆ ಹೌದು ಎಂದು ನುಡಿಯುತ್ತಾರೆ. ತುಕಾರಾಂ ಇವರ ಜಮೀನಾದ ಸರ್ವೆ ನಂ.ನಂ.84/3ಅ ಮತ್ತು 87/1ಬ ನೆದ್ದಕ್ಕೆ ಹಾಗೂ ವಾದಿಯರ ಜಮೀನಿಗೆ ಎಷ್ಟು ಹಣವನ್ನು ಕೊಟ್ಟಿರುತ್ತೀರಿ ಎಂದರೆ ಸಾಕ್ಷಿಯು ತುಕಾರಾಂ ಇವರಿಗೆ ರೂ.1,37,000/- ಮತ್ತು ವಾದಿಯರಿಗೂ ಸಹ ಅಷ್ಟೇ ಹಣವನ್ನು ಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ಇದರ ಬಗ್ಗೆ ದಸ್ತಾವೇಜಿನಲ್ಲಿ ಬರೆಸಿರುತ್ತೀರಾ ಎಂದರೆ ಸಾಕ್ಷಿಯು ಎರಡೂ ಜಮೀನಿಗೆ ಸಂಬಂಧಪಟ್ಟು ಹಣವನ್ನು ನಮೂದು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ವಾದಿಯರಿಗೆ ಪ್ರತ್ಯೇಕವಾಗಿ ಹಣವನ್ನು ಕೊಟ್ಟಿದ್ದರ ಬಗ್ಗೆ ನಮೂದು ಇರುವುದಿಲ್ಲ, ಅವರು ಮೊದಲೇ ತೆಗೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ತುಕಾರಾಂ ಇವರಿಗೆ ಎಷ್ಟನೇ ತಾರೀಖಿಗೆ ಕೊಟ್ಟಿರುತ್ತೀರಿ ಎಂದರೆ ಸಾಕ್ಷಿಯು ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ತುಕಾರಾಂ ಇವರಿಗೆ ಕೊಟ್ಟ ಹಣದ ಬಗ್ಗೆ ದಸ್ತಾವೇಜಿನಲ್ಲಿ ನಮೂದು ಇರುವುದಿಲ್ಲ ಎಂದರೆ ಸರಿಯಲ್ಲ. ದಿಃ07-03-2017 ರಲ್ಲಿ ಮಾಡಿಕೊಟ್ಟ ಕ್ರಯಪತ್ರಗಳಲ್ಲಿ ಇಂತಹ ದಿನಾಂಕದಂದು ಹಣವನ್ನು ಕೊಟ್ಟಿರುತ್ತೀರಿ ಎಂದು ನಮೂದು ಇರುತ್ತಾ ಎಂದರೆ ನಮೂದು ಇರುತ್ತದೆ ಎಂದು ನುಡಿಯುತ್ತಾರೆ.

ವಾದಿಯರು ಕ್ರಯಪತ್ರವನ್ನು ದುಡ್ಡು ಪಡೆದುಕೊಂಡು ಮಾಡಿಕೊಟ್ಟಿರುವುದಿಲ್ಲ, ಆದರೂ ಸಹ ನೀವು ಹಾಗೂ ನಿಮ್ಮ ಮಗ ಸೇರಿಕೊಂಡು ಮೋಸದಿಂದ ಕ್ರಯಪತ್ರವನ್ನು ಮಾಡಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ನಿಮಗೆ ನ್ಯಾಯಾಲಯದಿಂದ ಶಿಕ್ಷೆ ಸಹ ಆಗಿರುತ್ತದೆ ಎಂದರೆ ಸರಿಯಲ್ಲ. ನೀವು ಮತ್ತು ನಿಮ್ಮ ಮಗ ಸೇರಿಕೊಂಡು ಮೊಕ್ತಿಯಾರನಾಮೆಯ ಮೋಸದಿಂದ ಸುಳ್ಳು ಕ್ರಯಪತ್ರವನ್ನು ಮಾಡಿಸಿಕೊಂಡು ಸುಳ್ಳು ಕ್ರಯಪತ್ರವನ್ನು ಮಾಡಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ನಿಮ್ಮ ಮೇಲೆ ನಂಬಿಕೆ ಇಟ್ಟು, ವಾರಸಾ ಮಾಡಿಸುತ್ತೇನೆ ಎಂದು ಹೇಳಿದ್ದರಿಂದ ಅವರು ಸಹಿಯನ್ನು ಕೊಟ್ಟಿರುತ್ತಾರೆ, ಅದನ್ನು ನೀವು ದುರ್ಲಾಭ ಪಡೆದುಕೊಂಡು ಕ್ರಯಪತ್ರಗಳನ್ನು ಮಾಡಿಸಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ಸದರಿ ವ್ಯವಹಾರ ಸಾರ್ವಜನಿಕವಾಗಿ ತಿಳಿಯಬಾರದೆಂದು ನೀವು ಸದರಿ ಆಸ್ತಿಯನ್ನು ನಿಮ್ಮ ಮಗನ ಹೆಸರಿಗೆ ಮಾಡಿರುತ್ತೀರಿ ಎಂದರೆ ಸರಿಯಲ್ಲ. ಕ್ರಯಪತ್ರವನ್ನು ರದ್ದು ಮಾಡಿ, ಬೇರೆ ಕ್ರಯಪತ್ರವನ್ನು ಮಾಡಿಕೊಡಿ ಎಂದು ನೋಟೀಸು ಕೊಟ್ಟಿದ್ದರು ಎಂದರೆ ಸರಿ. ದಾವಾ ಜವೀನುಗಳನ್ನು ವಾದಿಯರೇ ಕಬ್ಜಾ ಸಾಗುವಳಿ ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸಾಕ್ಷಿಯು ಸ್ವತಃ ಜಂಗಲ್ ಭೂಮಿಯಾಗಿರುತ್ತದೆ ಎಂದು ನುಡಿಯುತ್ತಾರೆ. ಅವರು ಎಸ್ ಹೆಚ್ ನಾಯಕ ಇವರ ಮನೆಗೆ ಹೋಗಿದ್ದು ಇರುವುದಿಲ್ಲ ಹಾಗೂ ಮೋಕ್ತಿಯಾರನಾಮೆ ಪತ್ರವನ್ನು ಬರೆದುಕೊಟ್ಟಿದ್ದೂ ಇರುವುದಿಲ್ಲ ಎಂದರೆ ಸರಿಯಲ್ಲ. ಮೋಕ್ತಿಯಾರನಾಮೆ ಮಾಡಿಕೊಂಡ ನಂತರ ಕ್ರಯಪತ್ರವನ್ನು ಮಾಡಿ ದಾವಾ ಜಮೀನುಗಳನ್ನು ಸಾಗುವಳಿ ಮಾಡಿರುತ್ತೀರಾ ಅಥವಾ ಇಲ್ಲವಾ ಎಂದರೆ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ಸಾಕ್ಷಿಯು ಸ್ವತಃ ಸಾಗುವಳಿ ಜಮೀನು ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ನೀವು ಸದರಿ

ದಾವೆ ಮಾಡುವ ಪೂರ್ವದಲ್ಲಿ ಕಬ್ಜಾ ವಹಿವಾಟಿಗೆ ತೊಂದರೆ ಕೊಟ್ಟಿದ್ದರಿಂದ ಅವರು ರೆಕಾರ್ಡ ಉತಾರಗಳನ್ನು ತೆಗೆಸಿ ನೋಡಿದಾಗ ಗೊತ್ತಾಗಿದ್ದರಿಂದ ಈ ದಾವೆಯನ್ನು ಮಾಡುವ ಪ್ರಸಂಗ ಬಂದಿರುತ್ತದೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

C/c. ಸಿವಿಲ್ ನ್ಯಾಯಾಧೀಶರು, ಅಂಕೋಲಾ.